ಭಯಂಕರ ಪಶ್ಚಾತ್ತಾಪವಿದೆ..) ಇದಕ್ಕೆ ಬದಲಾಗಿ ಮೆಟ್ಟು ಮೆಟ್ಟಿ ಹಟ್ಟಿಗಿಳಿದ 'ಡೌಲಿನ' ಸುದ್ದಿ ಅಮ್ಮನ ಕಿವಿ ಮುಟ್ಟಿ ಅವಳಿಂದ ನನಗೆ ಪ್ರತಿ ಸಹಸ್ರ ನಾಮಾರ್ಚನೆಯಾಗುತಿತ್ತು...

ಒಮ್ಮೆಯಂತೂ, ಅಬ್ಬಾ ನೆನೆಸಿಕೊಂಡ್ರೆ ಈಗಲೂ ಮೈನಡುಕ ಹುಟ್ಟುತ್ತೆ! ಅಲ್ಲೇ ಎರಡುಮೈಲಿ ದೂರವಿರುವ ಸೋದರತ್ತೆಯ ಮನೆಯ ವಿಶೇಷದ ಊಟ ಮುಗಿಸಿಕೊಂಡು ನಾವು ಆಚೀಚೆ ಮನೆಯ ಆರೇಳು ಜನ ಕುಮಾರ ಕುಮಾರಿಯರೆಲ್ಲ ಸಂಜೆಯ ಇಳಿಬಿಸಿಲಲ್ಲಿ ಹರಟುತ್ತಾ ಹಿಂದಿರುಗುತ್ತಿದ್ದಾಗ ಹಾದಿ ಮಧ್ಯೆ ಅಲ್ಲೇ ಗುಡ್ಡದ ತುದಿಯಲ್ಲಿ ಮೇಯುತ್ತಿದ್ದ ಎತ್ತೊಂದು ನಮ್ಮ ಕಡೆಯೇ ಕೆಕ್ಕರಿಸಿ ನೋಡಲು ಶುರುಮಾಡಿತ್ತು! ಆವತ್ತು ಹರಿಹರಿ ಅಂತ ಕೆಂಪು ದಾವಣಿ ಧರಿಸಿದ್ದ ನನ್ನನ್ನು 'ಜಾಗ್ರತೆ' ಅಂತ ನನ್ನ ಸಹಚರರೆಲ್ಲ ಎಚ್ಚರಿಸಿದರೂ 'ಅದೆಲ್ಲ ಸುಳ್ಳು, ಗಂಟೆಗೆ ಬಣ್ಣ ಕುರುಡು' ಎಲ್ಲೋ ಓದಿದ ವಿಷಯ ಹೇಳಿ ನನ್ನ ಅತಿ ಜ್ಞಾನ ಪ್ರದರ್ಶಿಸಿದ್ದೆ. ಆಗ ಶುರುವಾಯ್ತು ನೋಡಿ ಮೂಗಿನ ಹೊಳ್ಳೆ ಅರಳಿಸುತ್ತಾ ಸುಮಿ ಸುಮಿದು ಬಾಲ ಮೇಲೆತ್ತಿ ಚಂಗನೆ ನೆಗೆಯುತ್ತಾ ಆ ಎತ್ತು ನನ್ನನ್ನು ಅಟ್ಟಿಸಿಕೊಂಡು ಬಂದಾಗ, ಅಬ್ಬಾ... ನಮ್ಮ ಪಿ ಟಿ ಉಷಾ ಯಾಕೆ, ಜಮೈಕಾದ ಉಸೈನ್ ಬೋಲ್ಟ್‌ನನ್ನೂ ಹಿಂದಿಕ್ಕುವ ವೇಗದಲ್ಲಿ ಓಡಿ ಹಳ್ಳಿಯ ಜಮೀನುಗಳ ಗಡಿರೇಖೆಯಾದ ಅಗುಳಿನ ಕಾಲ್ಸಂಕವನ್ನು ದಾಟಿದ ಮೇಲಷ್ಟೇ ಅದುವರೆಗೂ ವಿವರಣೆಗೆ ಸಿಗದಿದ್ದ 'ಜೀವ ಇದ್ರೆ ಬೆಲ್ಲ ಬೇಡಿ ತಿಂದೇನು' ಅನ್ನುವ ಮಾತಿನ ಅರ್ಥ ನನಗೆ ಹೊಳೆದದ್ದು!

ಹಾಗೇ, ಗೃಹಸ್ಥಾಶ್ರಮದ ಆರಂಭಿಕ ಹಂತದಲ್ಲಿ ಈ ರಾಸುಗಳೊಡನೆ ನನಗಿದ್ದ ಒಡನಾಟದ ಬಗ್ಗೆ ಹೇಳದಿದ್ದರೆ ಸ್ವಾರಸ್ಯವೇ ಇಲ್ಲ ಬಿಡಿ! ಮೊದಲನೆಯ ಬಾಣಂತನ ಮುಗಿಸಿಕೊಂಡು ಪಶ್ಚಿಮಘಟ್ಟಗಳ ಸೆರಗಿನಿಂದ ಪೂರ್ವಘಟ್ಟಗಳ ತಪ್ಪಲಿನ ನನ್ನವರು ಕೆಲಸ ಮಾಡುತ್ತಿದ್ದ ಸಿಟಿಗೆ ಕಾಲಿಟ್ಟರೆ ಅಲ್ಲೇ ಏಳೆಂಟು ಮೈಲಿ ದೂರದ ಹಳ್ಳಿಯಲ್ಲಿದ್ದ ನಮ್ಮ ಮಾವನವರ ಮಿದುಳಿಗೆ ಘನವಾದ ಯೋಚನೆಯೊಂದು ಹೊಳೆದು ಹೇಗೂ ಸ್ವಂತ ಮನೆ; ಕಾಂಪೌಂಡ್ ಒಳಗೆ ಬೇಕಷ್ಟು ಖಾಲಿ ಜಾಗವೂ ಇದೆ; ಮಾತ್ರವಲ್ಲ, ಸೊಸೆಗೆ ಹಾಲು ಕರೆಯಲೂ ಬರುತ್ತೆ ಹೇಗಂತ ಅದು ಕಾರ್ಯರೂಪಕ್ಕೆ ಇಳಿದಾಗ ನಮ್ಮಿಬ್ಬರ ಪಜೀತಿ ಬೇಡವೇ ಬೇಡ! ಆ ಆಫೀಸಿನ ಕೆಲಸಗಳ ನಡುವೆ ಈ ಕರಾವಿನ ಹಸುವಿಗೆ ಬೂಸಾ ಮತ್ತು ಹಸಿರು ಹುಲ್ಲನ್ನು ಕೊಂಡುತರುವುದರಲ್ಲೇ ನನ್ನವರು ಹೈರಾಣಾದರೆ ಕೈಗೂಸನ್ನು ಕಟ್ಟಿಕೊಂಡು ಕಾಲೇಜು ಓದುವ ಹುಡುಗರಾದ ಮೈದುನ ನಾದಿನಿಯರ ನಡುವೆ ಪಶುಪಾಲನೆ ಅಷ್ಟೊಂದು ಹಿತಕರವೆನ್ನಿಸಿರಲಿಲ್ಲ ನನಗೆ. ಬೇಕಾದಷ್ಟು ಶುದ್ಧ ಹಾಲೇನೋ ಈ ಕಾಮಧೇನುವಿನಿಂದ ಸಿಗುತ್ತಿತ್ತು ನಿಜ; ಆದರೆ? ನನ್ನವರ ಸ್ನೇಹಿತರೆಲ್ಲ 'ತೆನಾಲಿರಾಮ ಕುದುರೆ ಸಾಕಿದ ಹಾಗೆ' ಅಂತ ತಮಾಷೆ ಮಾಡುವುದಕ್ಕೂ ಆರೇಳು ತಿಂಗಳು ಕಳೆಯುವಷ್ಟರಲ್ಲಿ ನಾನು ತವರಿಗೆ ಹೋಗಲೇಬೇಕಾದ ಸಂದರ್ಭವೊಂದು ಒದಗಿ ಬರುವುದಕ್ಕೂ ಸರಿ ಹೋಗಿ, ಈ ನೆಪದಲ್ಲಿ ವಾಪಸು ಹಳ್ಳಿಗೆ ಹೊಡೆದ ಹಸುವನ್ನು ಪುನಃ ಸಿಟಿಗೆ ಕರೆಸಿಕೊಳ್ಳುವ ಸಾಹಸ ಮಾಡಲಿಲ್ಲ ನನ್ನವರು!

ಆದರೆ, ನಾಲ್ಕೈದು ವರ್ಷಗಳ ನಂತರ ಇನ್ನೊಮ್ಮೆ ಇದಕ್ಕಿಂತಲೂ ಕಿರಿಕಿರಿಯಾದ ಪ್ರಸಂಗ ಎದುರಾದದ್ದು ಸ್ವತಃ ನನ್ನವರ ಹಳ್ಳಿಮನೆಯಲ್ಲೇ! ಎರಡನೇ ಕೈಗೂಸನ್ನು ಕಟ್ಟಿಕೊಂಡು ನಾನು ಹಿಂತಿರುಗುವುದಕ್ಕೂ ನನ್ನ ಅತ್ತೆಮ್ಮನವರು ತಮ್ಮ ಎರಡನೆಯ ಮಗಳ ಮೊದಲ ಬಾಣಂತನಕ್ಕೆಂದು ಸಿಟಿ ಮನೆಗೆ ಬಂದಿಳಿಯುವುದಕ್ಕೂ ನನ್ನವರಿಗೆ ಪ್ರೊಮೋಶನ್ ನಿಮಿತ್ತ ಬೆಂಗಳೂರಿಗೆ ಟ್ರೈನಿಂಗ್ ಬೀಳುವುದಕ್ಕೂ ಸರಿ ಹೋಗಿ ಹಳ್ಳಿ ಮನೆಯ ಫಿಲ್ ಅಪ್ ದಿ ಬ್ಲ್ಯಾಂಕ್ ಸ್ಥಾನಕ್ಕೆ ಹಿರಿ ಸೊಸೆಯಾದ ನನ್ನ ವರ್ಗಾವಣೆಯಾಗಿ ಅಬ್ಬಾ! ಆ ಪಾಡು ಯಾವ ಹೆಣ್ಮಕ್ಕಳಿಗೂ